7. ಪ್ರತಿ ದಿನದ ಟೋಲ್ ವಸೂಲ್ ತೋರಿಸುವ ನಿಜವಾದ ಮತ್ತು ಕರಾರುವಾಕಾ ಲಿಖ್ತುವನ್ನು ಇಡಲೂ ಸಹಾ ಕಂಟ್ರಾಕ್ಟುದಾರನು ಬದ್ಧನಾಗಿ ಇರುವದಲ್ಲದೆ ಸಬ್ ಡಿವೀರ್ಜ ಮತ್ತು ತಾಲ್ಲೂಕು ಪುತ್ಯೋಗಸ್ಥರ ಇನ್ಸ್ಪೆಕ್ಷನ್‌ಗೆ ಲಿಖ್ತುವು ವಳಗಾಗಿ ಇರತಕ್ಕದ್ದು.

8. ಗವರ್ಮೆಂಟ್ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರ ನುಪಯೋಗಿಸತಕ್ಕದ್ದು ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿ ಇಟ್ಟುಕೊಂಡಿರತಕ್ಕದ್ದು.

9. ಕಂಟ್ರಾಕ್ಟುದಾರನು ಪ್ರತಿ ತಿಂಗಳ ಗುರ್ತ್ಯ ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲೀ ಲಿಖ್ತುವನ್ನ ಮುಂಜರಾಬಾದ್ ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು. ದರಗಳ ಪಟ್ಟು 1882ನೇ ಮಾರ್ಚಿ 18ನೇ ಮರಕೂಂ ಮೈಸೂರ ಗೆಜಟ್ಟಿನಲ್ಲಿ ನಮೂದಾಗಿರುತ್ತೆ.

ಟಿ. ಆನಂದರಾವ್,
ಸಬ್ ಡಿವೀರ್ಜ ಆಫೀಸರ್.

ನಗರ ಡಿವೀರ್ಜ.

ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಮಿ|| ಅರ್ಜೀ ನಂಬರ್ 4.

ಮೃತಪಟ್ಟ ದೇವೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಲಿಂಗೇಗೌಡನ ಮಗ ಬಸವೇಗೌಡ ಮೃತಪಟ್ಟ ಸದರೀ ದೇವೇಗೌಡನಿಗೆ ತಮ್ಮನು ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ತಾಲ್ಲೂಕು ಬಾಗಮನೆ ಸ್ಥಳದ ಬಸವೇಗೌಡನು ಸದರಿ ಬಾಗಮನೆ ವಾಸಸ್ಥನಾಗಿ ಮೃತಪಟ್ಟ ದೇವೇಗೌಡನ ಜಿಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿ ಸೂಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪೆಟಿಷನ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಸವೇಗೌಡರ ಅರ್ಜೀಯನ್ನು 1885ನೇ ಇಸವಿ ಮಾರ್ಚಿ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸ್ತರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಫಿಬ್ರವರಿ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 20ನೇ ಜನವರೀ 1885.

ಶಿವಮೊಗ್ಗಾ ಡಿಸ್ಟ್ರಿಕ್ಟ್ ನಗರ ವ ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಹೈದರಘಡಘಾಟಿ ಮತ್ತು ಆಗುಂಬೆ ವ ಲಕ್ಷ್ಮೀಪುರ ಘಾಟಿಗಳ ಟೋಲ್‌ಗೇಟ್ ಯೆಂಬ ಸುಂಕದ ಕಟ್ಟೆಗಳೊಳಗೆ ಸ್ಯ 1885ನೇ ಇಸವಿ ಏಪ್ರೆಲ್ 1ನೇ ಮಕ್ಕಂ. ಲಾಗಾಯತು, 1886ನೇ ಇಸವಿ ಮಾರ್ಚಿ 31ನೇ ಮಕ್ಕಂವರಿಗೆ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು ಕರೆಪೇರೆಯಾಗಿ 1885ನೇ ಇಸವಿ ಫಿಬ್ರವರೀ ತಾರೀಖು 25ರಲ್ಲು ನಗರ ತಾಲ್ಲೂಕು ಅಮಲ್‌ದಾರರಿಂದ ನಗರ ವೊಕ್ತಾಂನಲ್ಲೂ, ಅದೇ ತಿಂಗಳು ತಾರೀಖು 28ರಲ್ಲಿ ತೀರ್ಥಹಳ್ಳಿ ತಾಲ್ಲೂಕು ಅಮಲ್‌ದಾರರಿಂದ ತೀರ್ಥಹಳ್ಳಿ ವೊಕ್ತಾಂನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲಿ ಹಕ್ಕನ್ನು ಕೊಂಡು ಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗ್ಗತ್ತಾಗಿರುವ ಷೆಡ್ಯೂಲ್‌ನಲ್ಲಿ ನಮೂದಾಗಿರುವ ದರಗಳ ಮೇರಿಗೇನೆ ಟೋಲ್ ವಸೂಲ್ಮಾಡಬೇಕಾದ್ದಲ್ಲದೆ ಜಾಸ್ತಿ ದರಗಳನ್ನು ವಸೂಲ್ಮಾಡಕೂಡದು. ಮತ್ತು ಆತನು 1876ನೇ ಇಸವಿ ನವೆಂಬರ್ 4ನೇ ಮಕ್ಕಂ 274ನೇ ನಂಬರುಳ್ಳ ಲೇಟ್ ಚೀಫ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇಷನ್ನಿ ಫಾಯಿಸ್ಸಾಗಿರುವ ರೂಲ್ಸ್ ಪ್ರಕಾರ ನಡಕೊಳ್ಳಬೇಕು. ಸರಕಾರ ಸ್ವತ್ತು ಮತ್ತು ಸರಕಾರ ಕೆಲಸದ ಮೇಲೆ ಹೋಗುವ ಸರಕಾರ ಉದ್ಯೋಗಸ್ಥರು ಸುದಾ ಸುಂಕ ವಸೂಲಿಯಿಂದ ವಿನಾಯಿಸಲ್ಪಟ್ಟಿರುತ್ತಾರೆ.

3. ಇಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡಿಪ್ಯುಟಿ ಕಮ್ಮಿಷನರ ವರು ಅಧಿಕಾರ ವುಳ್ಳಿಕೊಂಡಿರುತ್ತಾರೆ.

4. ಯಾವನ ದರಖಾಸ್ತು ಅಂಗೀಕರಿಸಲ್ಪಡುತ್ತೆಯೋ ಆವನು ಕೂಡ್ಲೆ ದರಖಾಸ್ತು ವೊಬಲಗಿನಲ್ಲಿ ಆರರಲ್ಲಿ ಒಂದು ಮೊಬಲಗನ್ನು ಅಡ್ವಾನ್ಸಾಗಿ ಕೇವಣೀ ಇಟ್ಟು, ಬಾಕೀ ವೊಬಲಗನ್ನು 1885ನೇ ಇಸವಿ ಏಪ್ರಿಲ್ 20ನೇ ಮಕ್ಕಂ ಲಾಗಾಯಿತು ನಾದ 10 ಖಿಸ್ತುಗಳಾಗಿ ಪ್ರತಿ ತಿಂಗಳ 20ನೇ ತಾರೀಖಿಗೆ ಪಾವತೀ ಮಾಡಬೇಕು. ಕೇವಣೀ ವೊಬಲಗು 11 ವ 12ನೇ ಖಿಸ್ತು ವುಪಯೋಗಿಸಲ್ಪಡುವದು. ದರಖಾಸ್ತುದಾರನು ಮಾಹೆವಾರ್ ಖಿಸ್ತುವೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಒಬ್ಬನನ್ನು ಜಾಮೀನು ಕೊಡಬೇಕು.

5. ಕೇವಣೀ ಇಡದೆ ಇದ್ದರೆ ಅಥವಾ ಜಾಮೀನ್ ಕೊಡದೆ ಇದ್ದರೆ ದರಖಾಸ್ತುದಾರಗೆ ಲುಕ್ಸಾನುಕರವಾಗಿ ಕಂಟ್ರಾಕ್ಟು 2ನೇ ಹರಾಜ್ ಮಾಡಲ್ಪಡವದು, ಖಿಸ್ತುಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಪಾವತೀ ತಾರೀಖಿನವರಗೆ ತಿಂಗಳು 1ಕ್ಕೆ ರೂಪಾಯಿ 1ಕ್ಕೆ 1 ಕಾಸಿನಂತೆ ಬಡ್ಡಿ ವಸೂಲ್ಮಾಡಲ್ಪಡುವದು; ಮತ್ತು ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋರುವಂತೆ ಜಾಮೀನಿದಾರನ ಆಸ್ತಿ ಪ್ರಕಾರ ಕಂಟ್ರಾಕ್ಟು 2ನೇ ಹರಾಜು ಮಾಡಿಸಲ್ಪಡುವದಕ್ಕೆ ಗರಿಯಾಗತಕ್ಕದ್ದು, ಅದರಿಂದ ಯೇನಾದರೂ ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀನ್ದಾರನಿಂದ ವಸೂಲ್ಮಾಡಲ್ಪಡತಕ್ಕದ್ದು.

6. ದರಖಾಸ್ತು ವೊಬಲಗು ರಿವಾಯಿ 4—5ನೇ ಕಲಂಗಳಲ್ಲಿ ನಮೂದಾದ ಷರತ್ತಿಗೆ ವಳಪಟ್ಟು ಖಿಜಾನೆಗೆ ಸಲುಯಿಸುವ ಸದರೀ ಕಂಟ್ರಾಕ್ಟು ವೊಬಲಗಿನ ರೂಪಾಯಿ 1ಕ್ಕೆ ಬಂದು ಆಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿರುತ್ತಾನೆ.

7. ಪ್ರತಿ ದಿವಸದ ಟೋಲ್ ವಸೂಲಿ ತೋರಿಸುವ ಲೆಖ್ಖವನ್ನು ಇಡಲು ಸಹ ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ಥರ ಇನ್ಸ್‌ಪೆಕ್ಷನಿಗೆ ಲೆಖ್ಖ ವಳಗಾಗಿರತಕ್ಕದ್ದು ಮತ್ತು ಆತನು ತಾಲ್ಲೂಕಿಗೆ ಮಾಹೆವಾರು ಲೆಖ್ಖವನ್ನು ಕೊಡತಕ್ಕದ್ದು.

8. ಘಾಟಿಯಲ್ಲಿರತಕ್ಕ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರ ಉಪಯೋಗಿಸತಕ್ಕದ್ದು, ಮತ್ತು ಅವುಗಳನ್ನು ಆತನು ಪೂರಾ ದುರಸ್ತಿನಲ್ಲಿಟ್ಟು ಕೊಂಡಿರತಕ್ಕದ್ದು.

ದರಗಳ ಪಟ್ಟಿ.

		ರೂ.	ಆ.	ಪೈ.
1	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2	ಪ್ರತಿ ಯರಡು ಡಿಟೋ	1	0	0
3	ಪ್ರತಿ ಯಕ್ಕಾ ಮೆಲೂ	0	4	0
4	ಸ್ಪ್ರಿಂಗ್‌ಯಾನೆ ಬಿಲ್ಲಿನ ಮೇಲೆ ಇರುವ ಬಾಡಿಗೆ ಭಂಡಿ ಪ್ರತಿ 1ಕ್ಕೆ.	0	2	0
5	ಎಂಟು ಯತ್ತುಗಳಿಂದ ಯಾ ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ, ಯಾ ಹೇಸರ ಕತ್ತೆಗಳಿಂದ ಯಿಳೆಯಲ್ಪಟ್ಟ ಬಿಲ್ಲಿನ ಮೇಲೆ ಯಿಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ	1	8	0
6	ಡಿಟೋ ಡಿಟೋ ಡಿಟೋ ಭರ್ತೀ ಇಲ್ಲದಿದ್ದರೆ	0	8	0
7	ಆರು ಯತ್ತುಗಳು ವಗೈರೇಗಳಿಂದ ಯಿಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತೀಯಾಗಿದ್ದರೆ ..	0	12	0
8	ಡಿಟೋ ಡಿಟೋ ಡಿಟೋ ಭರ್ತೀ ಯಿಲ್ಲದಿದ್ದರೆ.	0	6	0
9	ನಾಲ್ಕು ಯತ್ತುಗಳು ವಗೈರೆಗಳಿಂದ ಯಿಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ.	0	8	0
10	ಡಿಟೋ ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	4	0
11	ಯೆರಡು ಯತ್ತುಗಳಿಂದ ಯಿಳೆಯಲ್ಪಟ್ಟ ಗಾಡಿ ಯಾ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ ..	0	4	0
12	ಡಿಟೋ ಡಿಟೋ ಇಲ್ಲದಿದ್ದರೆ.	0	2	0
13	ಕೋಣಗಳು ಯಾ ಯತ್ತುಗಳು ರಾಸು 1ಕ್ಕೆ ಹೊರೆ ಹೊರಿಸಲ್ಪಟ್ಟಿದ್ದರೆ	0	1	0
14	ಡಿಟೋ ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ವಂಟೆಗೂ ಹೊರೆ ಹೊರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದಿದ್ದರೆ	0	4	0
18	ಡಿಟೋ ಕುದುರೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	1	6
19	ಹೊರೆ ಇಲ್ಲದ ಯಾ ಹಿಡದುಕೊಂಡು ಹೋಗುವ ಪ್ರತಿ ಕುದುರೆಗೂ.	0	0	9
20	ಪ್ರತಿ ತಟ್ಟು ಯಾ ಹೇಸರ ಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ..	0	0	9

			ರೂ.	ಆ.	ಪೈ.
21.	ಪ್ರತಿತಟ್ಟು ಯಾ ಹೇಸರಕತ್ತೆಗೂ ಹೊರೆ ಇಲ್ಲದ ಯಾ ಹಿಡದುಕೊಂಡು ಹೋಗಲ್ಪಡುವದಕ್ಕೆ	..	0	0	6
22	ಪ್ರತಿ ಕತ್ತೆಗೂ ಹೊರೆ ಹೊರಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	..	0	0	6
23	ಹೊರೆ ಇಲ್ಲದ ಯಾ ಹಿಡದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	..	0	0	1
24	ಪ್ರತಿ ಕುರಿ, ಮೇಕೆ ಯಾ ಹಂದಿಗೂ	..	0	0	1
25	ಯಂಟು ಭೋಯಿಗಳೊಡನೆ ಪ್ರತಿ ಪೋಲಿ, ಪಾಲಿಬಿ ಯಾ ಟಾಂಜಾನಿಗೂ	..	1	0	0
26	ಆರು ಭೋಯಿಗಳೊಡನೆ ಡಿಟೋ. ಡಿಟೋ ..	..	0	12	0
27	ನಾಲ್ಕು ಭೋಯಿಗಳೊಡನೆ ಡಿಟೋ ಡಿಟೋ ..	..	0	8	0
28	ಇಬ್ಬರುಭೋಯಿಗಳೊಡನೆ ಡಿಟೊ ಡಿಟೋ ..	..	0	4	0

ನಡದು ಬರುವ ಮಾರ್ಗಸ್ಥರ ಮೇಲೆ ಟೋಲ್ ವಸೂಲ್ಮಾಡತಕ್ಕದ್ದಲ್ಲ.

ಜಿ. ಯಫ್. ಮೈಕಲ್ಜಾರ್ಜ್,
ಡೆಪ್ಯುಟಿ ಕಮ್ಮಿಷನರ್.

ತಾರೀಖು 20ನೇ ಜನವರೀ 1885.

ಇದರಿಂದ ಪ್ರಕಟಪಡಿಸುವದೇನಂದರೆ—ಸ್ಯ 1878ನೇ ಇಸವಿ ಜೂನ್ 8ನೇ ಮರಕೂಮಿನ ಫಾರೆಸ್ಟು ರೂಲ್ಸಿನ ಪೈಕೀ 13ನೇ ರೂಲಿನ ನಿಬಂಧನೆಗಳನುಸರಿಸಿ ಇದರಡಿಕಂಡ ಸ್ಟೇಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷ್ಗಳು ಸ್ಯ 1885ನೇ ಇಸವಿ ಜನವರೀ 25ನೇ ಮರಕೂಂ ಲಾಗಾಯಿತು ಅದೇ ಇಸವಿ ಮೇ 31ನೇ ಮರ್ಕೂಂವರಿಗೆ ಪೇಟೆಗಾರರಿಗೂ ಮತ್ತು ಇತರರಿಗೂ ಬಂದ್ ಮಾಡಲ್ಪಟ್ಟಿರುತ್ತೆ:—

ಲಕ್ಕುವಳ್ಳಿ ಸ್ಟೇಟ್ ಫಾರೆಸ್ಟು	..	ತರೀಕೆರೆ ತಾಲ್ಲೂಕು.
ಡಿಟೋ ತೇಗದ ಪ್ಲಾಂಟೇಷ್	..	ಡಿಟೋ.
ಸಕ್ರೆಬೈಲ್ ಸ್ಟೇಟ್ ಫಾರೆಸ್ಟು	..	ಶಿವಮೊಗ್ಗ ತಾಲ್ಲೂಕು.
ಡಿಟೋ ತೇಗದ ಪ್ಲಾಂಟೇಷ್	..	ಡಿಟೋ.
ಶಂಕರಗುಡ್ಡ ಸ್ಟೇಟ್ ಫಾರೆಸ್ಟು	..	ಡಿಟೋ.
ಆಲ್ಕೊಳ್ಳದ ಸಂದಲ್ ರಿಜರ್ವ್	..	ಡಿಟೋ.
ಅನಿಮಗುತ್ತಿ ಡಿಟೋ	..	ಡಿಟೋ
ಹೆಬ್ಬೆ ತೇಗದ ಪ್ಲಾಂಟೇಷ್	..	ಕೊಪ್ಪ ತಾಲ್ಲೂಕು.

ಇ. ಪಿ. ಲವರ್,
ಅಸಿಸ್ಟೆಂಟ್ ಕನಸರವೇಟರ್ ಆಫ್ ಫಾರೆಸ್ಟ್ಸ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 11ನೇ ಫಿಬ್ರವರೀ 1885.

ಮೂಡಗೆರೆ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮತ್ತು 3ನೇ ಕ್ಲಾಸ್ ಮಾಜಿಸ್ಟ್ರೇಟ್ ವೆಂಕವರದಯ್ಯಂಗಾರ್ರಿಗೆ, ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 23ನೇ ಸೆಕ್ಷನ್ ನಿಯಮಗಳನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತವೆ.—

ಸೆಕ್ಷನ್ 23 (ಬಿ) 1. ಲಾಷ್ ವಿಚಾರಣೆ ಬಗ್ಗೆ ಅಧಿಕಾರ (ಸೆಕ್ಷನ್ 135)

2. ಅವರಿಗೆ ದಸ್ತಾಪ್ತಿ ಮಾಡುವದಕ್ಕೆ ಅಧಿಕಾರ ವಿರುವ ವೊಕ್ಕದ್ದವಿಗಳಲ್ಲಿ ತಕರೀರುಗಳ ಫಿರ್ಯಾದು ಗಳನ್ನು ದಾಖಲ್ಮಾಡಿಕೊಳ್ಳುವದಕ್ಕೆ ಅಧಿಕಾರ (ಸೆಕ್ಷನ್ 141)

3. ನಿರೋಧ ವಗೈರೆಗಳನ್ನು ಅಡ್ಡೀಪಡಿಸುವಂತೆ ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆಕ್ಷನ್ 158)

4. ಹೇಕೆಗಳು ಬಾರ್ ಬಾರ್ ನಡಿಯದಂತೆ ಅಡ್ಡೀಪಡಿಸಲು ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆಕ್ಷನ್ 519.)

ಮಹಮ್ಮದ್ ಅಲ್ಲಿ ಕೆ. ಬಿ.,
ಆ॥ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.